**ದಿನಾಂಕ : *18-07-2025* ರಂದು ಸಾಕ್ಷಿಗೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**
**ಪಾಟೀ ಸವಾಲು : *2* ನೇ ಎದರುದಾರರ ಪರವಾಗಿ ಶ್ರೀ. ಆರ್ ಪಿ ಕೆ ವಕೀಲರಿಂದ,**

ಮೋಟರ ಸೈಕಲ್ಲ ನಂಬರ ಹೇಳಲು ಬರುವುದಿಲ್ಲ. ಮೋಟರ ಸೈಕಲ್ಲ ನಂ. ಕೆಎ-29 ಇಬಿ0401 ಇದನ್ನು ನನ್ನ ಗಂಡ ಚಲಾಯಿಸುತ್ತಿದ್ದ ಎಂದರೆ ಸರಿ. ಸದರಿ ಮೋಟರ ಸೈಕಲ್ಲ ನನ್ನ ಗಂಡನ ತಮ್ಮನ ಹೆಸರಿನಲ್ಲಿ ಇರುತ್ತದೆ. ಇದನ್ನು ಯಾವ ವಿಮಾ ಕಂಪನಿಯಲ್ಲಿ ವಿಮೆ ಮಾಡಿಸಿರುತ್ತಾರೆ ಎಂದು ಗೊತ್ತಿರುವುದಿಲ್ಲ. ನಮ್ಮ ವಾಹನಕ್ಕೆ ಯಾವುದೇ ವಿಮಾ ಕಂಪನಿಯ ವಿಮೆ ಇರಲಿಲ್ಲ ಎಂದರೆ ಸರಿಯಲ್ಲ. ವಿಮಾ ಪತ್ರವನ್ನು ಸಲ್ಲಿಸಿರುವ ಬಗ್ಗೆ ಗೊತ್ತಿರುವುದಿಲ್ಲ. ನನ್ನ ಗಂಡನಿಗೆ ಸದರಿ ವಾಹನವನ್ನು ಚಲಾಯಿಸಲು ಡಿ ಎಲ್ ಇರಲಿಲ್ಲ ಎಂದರೆ ಸರಿ. ಡಿ ಎಲ್ ಇರದೇ ಇರುವುದರಿಂದ ವಾಹನವನ್ನು ಚಲಾಯಿಸಲು ನನ್ನ ಗಂಡನಿಗೆ ಬರುವುದಿಲ್ಲ ಎಂದರೆ ಸರಿಯಲ್ಲ. ಅಪಘಾತವಾದ ದಿನ ನನ್ನ ಗಂಡ ಹೆಲ್ಮೆಟ್ ಹಾಕಿರಲಿಲ್ಲ. ನನ್ನ ಗಂಡನಿಗೆ ಮಾತನಾಡಲು ಬರುವುದಿಲ್ಲಎಂದು ದಾಖಲೆಗಳನ್ನು ಸಲಿಸಿರುವುದಿಲ್ಲ. ನನ್ನ ಗಂಡ ಸಂಪೂರ್ಣವಾಗಿ ಆರಾಮ ಆಗಿದ್ದು, ಅವರು ಬಂದರೆ ಸತ್ಯ ಹೊರಗೆ ಬರುತ್ತದೆ ಎಂದು ನಾನು ಮಾನ್ಯ ನ್ಯಾಯಾಲಯಕ್ಕೆ ಬಂದಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಗಂಡನಿಗೆ ತಲೆ ಸರಿ ಇರುವುದಿಲ್ಲ ಎಂದು ದಾಖಲೆಗಳನ್ನು ಸಲ್ಲಿಸಿರುವುದಿಲ್ಲ. ನನ್ನ ಗಂಡ ವಾಹನ ಚಲಾಯಿಸಿಕೊಂಡು ಮುಂದೆ ಹೋಗುತ್ತಿರುವಾಗ ಹಿಂದಿನಿಂದ ಅಪಘಾತವಾಗಿರುತ್ತದೆ. ನನ್ನ ಗಂಡ ವಾಹನದಲ್ಲಿ ಮುಂದೆ ಹೋಗುತ್ತಿರುವಾಗ ಒಮ್ಮಿಂದೊಮ್ಮೆಲೆ ಬಲಕ್ಕೆ ಟರ್ನ ಮಾಡಿದ್ದರಿಂದ ಹಿಂದಿನಿಂದ ಗಾಡಿ ಬಂದು ಡಿಕ್ಕಿ ಪಡಿಸಿರುತ್ತದೆ ಎಂದರೆ ಸರಿಯಲ್ಲ.

ಹಿಂದಿನಿಂದ ಡಿಕ್ಕಿ ಪಡಿಸಿದ ವಾಹನದ ಚಾಲಕನಿಗೆ ಡಿಎಲ್ ಇರಲಿಲ್ಲ ಎಂದರೆ ಸಾಕ್ಷಿದಾರರು ಇದ್ದಿರಬಹುದು ಎಂದು ಹೇಳುತ್ತಾರೆ. ಪೋಲಿಸರು ಅವನಿಗೆ ಡಿಎಲ್ ಇರುವುದಿಲ್ಲ ಎಂದು ನಮೂದಿಸಿರುತ್ತಾರೆ ಎಂದರೆ ಸಾಕ್ಷಿದಾರರು ನನಗೆ ಗೊತ್ತಿರುವುದಿಲ್ಲ ಎಂದು ಹೇಳುತ್ತಾರೆ. ನನ್ನ ಗಂಡ ಚಲಾಯಿಸುತ್ತಿದ್ದ ವಾಹನದ ತಪ್ಪಿನಿಂದ ಸದರಿ ಅಪಘಾತವು

ಸಂಭವಿಸಿರುತ್ತದೆ ಎಂದರೆ ಸರಿಯಲ್ಲ. ಅಪಘಾತದಿಂದ ನನ್ನ ಗಂಡನ ತಲೆಗೆ, ಹಣೆಗೆ, ಮುಂಗೈಗೆ, ಬಲಗಾಲಿಗೆ ಪೆಟ್ಟಾಗಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನಗಂಡನಿಗೆ ಸಾದಾ ಸ್ವರೂಪದ ಗಾಯಗಳು ಆಗಿರುತ್ತವೆ ಎಂದರೆ ಸರಿಯಲ್ಲ. ನನ್ನ ಗಂಡ ಕೆರೂಡಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಗಂಡ ಸಂಪೂರ್ಣವಾಗಿ ಹುಷಾರಾಗಿದ್ದು, ಮೊದಲಿನ ರೀತಿ ಕೆಲಸ ಮಾಡುತ್ತಾರೆ ಎಂದರೆ ಸರಿಯಲ್ಲ. ನಾನು ಹಾಜರು ಪಡಿಸಿರುವ ವೈದ್ಯಕೀಯ ಬಿಲ್ಲುಗಳು ಖೊಟ್ಟಿಯಾಗಿರುತ್ತವೆ ಎಂದರೆ ಸರಿಯಲ್ಲ. ನಾನು ಹಾಜರು ಪಡಿಸಿರುವ ವೈದ್ಯಕೀಯ ಬಿಲ್ಲುಗಳಲ್ಲಿ ಮುಂಗಡವಾಗಿ ಕೊಟ್ಟಿದ್ದ 6 ರಶೀದಿಗಳು ಸೇರಿರುತ್ತವೆ ಎಂದರೆ ಸರಿಯಲ್ಲ. ಹೆಚ್ಚಿಗೆ ಪರಿಹಾರದ ಹಣವನ್ನು ಪಡೆಯಬೇಕೆಂದು ಅವುಗಳನ್ನು ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಗಂಡನಿಗೆ ಅಪಘಾತವಾದಾಗ 30 ವರ್ಷ ಆಗಿತ್ತು ಎಂದು ತೋರಿಸಲು ದಾಖಲೆಗಳನ್ನು ಹಾಜರು ಪಡಿಸಿರುವುದಿಲ್ಲ. ನನ್ನ ಗಂಡ ಕೂಲಿ ಕೆಲಸ ಮಾಡುತ್ತಿದ್ದ. ನನ್ನ ಗಂಡ ಕೂಲಿ ಕೆಲಸ ಮಾಡಿ 12 ಸಾವಿರ ರೂ.ಗಳನ್ನು ಗಳಿಸುತ್ತಿದ್ದ ಎಂದು ತೋರಿಸಲು ದಾಖಲೆಗಳನ್ನು ಹಾಜರು ಪಡಿಸಿರುವುದಿಲ್ಲ. ನಮ್ಮ ಮನೆಯನ್ನು ನಮ್ಮ ಮೈದುನ ನಡೆಸುತ್ತಿದ್ದಾನೆ ಎಂದರೆ ಸರಿಯಲ್ಲ. ದೂರನ್ನು ನಾನು ನೀಡಿರುತ್ತೇನೆ. 3 ನೇ ಎದರುದಾರರು ಡಿ ಎಲ್ ಇರದೇ ಇರುವ 1 ನೇ ಎದುರುದಾರರಿಗೆ ಮೋಟರ ಸೈಕಲ ಚಲಾಯಿಸಲು ಕೊಟ್ಟಿದರಿಂದ 1 ಮತ್ತು 3 ನೇ ಎದರುದಾರರು ಪರಿಹಾರದ ಹಣವನ್ನು ಕೊಡಲು ಭಾದ್ಯಸ್ತರು ಎಂದರೆ ಸರಿಯಲ್ಲ. ನನ್ನ ಗಂಡನಿಗೆ ಡಿ ಎಲ್ ಇರದೇ ಇರುವುದರಿಂದ ಪರಿಹಾರದ ಹಣವನ್ನು ಕೊಡಲು 2 ನೇ ಎದರುದಾರರು ಭಾದ್ಯಸ್ತರಲ್ಲ ಎಂದರೆ ಸರಿಯಲ್ಲ.

**ಪಾಟೀ ಸವಾಲು : 1 ಮತ್ತು 3 ನೇ ಎದರುದಾರರು ತಮ್ಮ ಪ್ರತಿವಾದ ಪತ್ರವನ್ನು ಸಲ್ಲಿಸದೇ ಇರುವುದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಗಿದೆ.**

**ಮರು ವಿಚಾರಣೆ ಇಲ್ಲ**

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿದೆ )

ಓ. ಹೇ. ಕೇ. ಸರಿ ಅದೆ.

ಹಿರಿಯ ದಿವಾಣಿ ನ್ಯಾಯಾಧೀಶರು,
ಹಾಗೂ ಜೆ.ಎಮ್.ಎಫ್.ಸಿ, ಹುನಗುಂದ.